**ಇಂದು ದಿನಾಂಕಃ 25-07-2025 ಸಾಕ್ಷಿಗೆ ಪುನಃ ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಪಾಟೀ ಸವಾಲುಃ 2ನೇ ಪ್ರತಿವಾದಿ ಪರವಾಗಿ ಶ್ರೀ C.S. ವಕೀಲರಿಂದಃ-**

1 ಮತ್ತು 2ನೇ ಪ್ರತಿವಾದಿಯರು ತಮ್ಮ ಜಮೀನಿನಲ್ಲಿ ಬಿತ್ತನೆ ಮಾಡುತ್ತಿರುವಾಗ ನಾನು ಹಸ್ತಕ್ಷೇಪ ಮಾಡಿದ್ದಕ್ಕೆ ನನ್ನ ವಿರುದ್ದ ಕ್ರಿಮಿನಲ್ ಪ್ರಕರಣ ದಾಖಲಾಗಿರುತ್ತದೆ ಎಂದರೆ ಸಾಕ್ಷಿ ನಾವು ಬಿತ್ತನೆ ಮಾಡುತ್ತಿರುವಾಗ ಅವರೇ ನಮ್ಮ ಜೊತೆ ಜಗಳ ಮಾಡಿ ನಮ್ಮ ವಿರುದ್ದ ಸುಳ್ಳು ಪ್ರಕರಣ ದಾಖಲಿಸಿರುತ್ತಾರೆ ಎಂದು ನುಡಿಯುತ್ತಾರೆ. ಸದರಿ ಕ್ರಿಮಿನಲ್ ಪ್ರಕರಣದ ಸಂಖ್ಯೆ ಸಿಸಿ 1652/2024 ಇರುತ್ತದೆ ಎಂದರೆ ಸಾಕ್ಷಿ ನನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ. ಈಗ ಭೋಗಲಿಂಗದಳ್ಳಿ ತಾಂಡಾದಲ್ಲಿ ನಮ್ಮ ಅತ್ತೆ ಮಾವನಿಗೆ ಬಂದ ಒಂದು ಮನೆ ಇದೆ ಎಂದರೆ ಸರಿ. ನಮಗೆ ಹಿರಿಯರಿಂದ ಬಂದ ಮನೆ ಚಿಂಚೋಳಿ ಊರಿನಲ್ಲಿ ಇಲ್ಲ ಎಂದರೆ ಸರಿ. ನಾನು ಚಿಂಚೋಳಿಯ ಬಾಡಿಗೆ ಮನೆಯಲ್ಲಿ ವಾಸವಿದ್ದೇನೆ. ನಮ್ಮ ಮನೆಯಿಂದ ದಾವಾ ಜಮೀನು 5 ರಿಂದ 6 ಕಿ.ಮೀ. ದೂರವಿದೆ. ಪ್ರತಿದಿನ ದಾವಾ ಜಮೀನಿಗೆ ಹೋಗುತ್ತಿರಾ ಎಂದು ಪ್ರಶ್ನಿಸಿದಾಗ ಸಾಕ್ಷಿ ಆಗಾಗ ಹೊಗುತ್ತೇವೆ ಎಂದು ನುಡಿಯುತ್ತಾರೆ. ದಾವಾ ಜಮೀನಿನ ಚಕ್ಕುಬಂದಿ ಹೇಳಲು ಬರುತ್ತದೆಯೇ ಎಂದು ಪ್ರಶ್ನಿಸಿದಾಗ ಸಾಕ್ಷಿ ಸುತ್ತಾಮುತ್ತಾ ಇರುವ ಜಮೀನಿನ ಮಾಲೀಕರ ಹೆಸರು ಹೇಳಬಹುದು ಎಂದು ನುಡಿಯುತ್ತಾರೆ. ನಮ್ಮ ಅತ್ತೆ ಮಾವ ಬಿದ್ದುಹೋದ ಮನೆಯಲ್ಲಿ ವಾಸವಿದ್ದರು ಎಂದರೆ ಸಾಕ್ಷಿ ಚಿಂಚೋಳಿ ಪಟ್ಟಣದಲ್ಲಿ ವಾಸವಿದ್ದಾರೆ ಎಂದು ನುಡಿಯುತ್ತಾರೆ. ನಮ್ಮ ಹತ್ತಿರ ಒಕ್ಕಲುತನವಿಲ್ಲ. ನಿಮ್ಮ ಹೊಲ ಯಾರು ವ್ಯವಸಾಯ ಮಾಡುತ್ತಾರೆ ಎಂದು ಪ್ರಶ್ನಿಸಿದಾಗ ಸಾಕ್ಷಿ ಸ್ವಲ್ಪ ಜಮೀನಿನ್ನು ಕಡತಿ ಕೊಟ್ಟಿರುತ್ತೇವೆ ಮತ್ತು ಸ್ವಲ್ಪ ಜಮೀನಿನಲ್ಲಿ ಟ್ರಾಕ್ಟರ ಹೊಡೆಯುತ್ತೇವೆ ಎಂದು ನುಡಿಯುತ್ತಾರೆ.

ನನ್ನ ಅಣ್ಣಾ ಲಕ್ಷ್ಮೀಕಾಂತ ಬಿಜೆಪಿಯ ಮುಖಂಡ ಮತ್ತು ಒಂದು ಓಣಿಯ ಕೌನ್ಸಿಲ್ಲರ ಇರುತ್ತಾರೆ ಎಂದರೆ ಸರಿ. ನನ್ನ ಗಂಡ ತಹಸಿಲ್ದಾರ ಕಛೇರಿಯ ಪಹಣಿ ವಿಭಾಗದಲ್ಲಿ ಕೆಲಸ ಮಾಡುತ್ತಿದ್ದರು ಎಂದರೆ ಸಾಕ್ಷಿ ಜಾತಿ ಮತ್ತು ಆದಾಯ ವಿಭಾಗದಲ್ಲಿ ಕೆಲಸ ಮಾಡುತ್ತಿದ್ದರು ಎಂದು ನುಡಿಯುತ್ತಾರೆ. ದಾವಾ ಜಮೀನಿನು ನಮ್ಮ ಮಾವನಿಗೆ ಹೇಗೆ ಬಂತು ಎಂದು ತೋರಿಸಲು ನ್ಯಾಯಾಲಯಕ್ಕೆ ದಾಖಲೆ ಸಲ್ಲಿಸಿಲ್ಲ ಎಂದರೆ ಸರಿಯಲ್ಲ. ದಾವಾ ಜಮೀನು ನಮ್ಮ ಮಾವನ ಹೆಸರಿನಲ್ಲಿ ಯಾವ ರೀತಿ ವರ್ಗಾವಣೆಯಾಗಿದೆ ಎಂದು ತೋರಿಸಲು ದಾಖಲೆಗಳನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿಲ್ಲ ಎಂದರೆ ಸರಿಯಲ್ಲ. ಪ್ರತಿವಾದಿಯರು ಯಾವ ದಿಕ್ಕಿನಿಂದ ನಿಮ್ಮ ಜಮೀನಿನಲ್ಲಿ ಹಸ್ತಕ್ಷೇಪ ಮಾಡುತ್ತಿದ್ದಾರೆ ಎಂದು ಪ್ರಶ್ನಿಸಿದಾಗ ಸಾಕ್ಷಿ ನಾವು ಬಿತ್ತನೆ ಮಾಡಲು ಹೋದಾಗ ನಮ್ಮೊಂದಿಗೆ ಜಗಳ ಮಾಡುತ್ತಾರೆ ಎಂದು ನುಡಿಯುತ್ತಾರೆ. ಯಾವ ದಿನಾಂಕದಂದು ಹಸ್ತಕ್ಷೇಪ ಮಾಡಿದ್ದಾರೇ ಎಂದು ಹೇಳಬಹುದೇ ಎಂದು ಪ್ರಶ್ನಿಸಿದಾಗ ಸಾಕ್ಷಿ ನಾವು ಯಾವಾಗಲೂ ಹೋದಾಗ ನಮ್ಮೊಂದಿಗೆ ಜಗಳ ಮಾಡುತ್ತಾರೆ ಆದ್ದರಿಂದ ನಾವು ಅಲ್ಲಿಗೆ ಹೋಗೊದು ಬಿಟ್ಟಿದ್ದೇವೆ ಎಂದು ನುಡಿಯುತ್ತಾರೆ.

1ನೇ ಪ್ರತಿವಾದಿ ಕೆಲವು ವ್ಯಕ್ತಿಗಳಿಗೆ ದಾವಾ ಜಮೀನಿನಲ್ಲಿ ನಿವೇಶನವನ್ನು ನಿರ್ಮಿಸಿ ಮಾರಾಟ ಮಾಡಿದ್ದಾರೆ ಎಂದರೆ ಸರಿಯಲ್ಲ. ಪ್ರಭುರವರಿಗೆ ನೀವು ಜಮೀನಿನಲ್ಲಿ ಯಾಕೆ ಮನೆ ಕಟ್ಟುತ್ತಿದ್ದಿರಾ ಎಂದು ನೋಟಿಸನ್ನು ನೀಡಿದ್ದಿರಾ ಎಂದು ಪ್ರಶ್ನಿಸಿದಾಗ ಸಾಕ್ಷಿ ಪ್ರಭುರವರು 1ನೇ ಪ್ರತಿವಾದಿಯಿಂದ ಹಣ ಪಡೆದು ಜಮೀನು ನಮ್ಮದು ಇದೆ ಎಂದು ಹೇಳಿ ನಮಗೆ ಹಣ ನೀಡಿ ನನ್ನ ಅತ್ತೆಯ ಸಹಿ ಪಡೆದಿರುತ್ತಾರೆ ಎಂದು ನುಡಿಯುತ್ತಾರೆ. ನಮ್ಮ ಅತ್ತೆ ಪ್ರಭುರವರಿಗೆ ನಿವೇಶವನ್ನು ಮಾರಾಟ ಮಾಡಿದ್ದಾರೆ ಎಂದು ತೋರಿಸಲು ನ್ಯಾಯಾಲಯಕ್ಕೆ ದಾಖಲೆಗಳನ್ನು ಹಾಜರುಪಡಿಸಿದ್ದಿರಾ ಎಂದು ಪ್ರಶ್ನಿಸಿದಾಗ ಸಾಕ್ಷಿ ಇನ್ನುಮುಂದೆ ಹಾಜರುಪಡಿಸುತ್ತೇನೆ ಎಂದು ನುಡಿಯುತ್ತಾರೆ. ನಮ್ಮ ಅತ್ತೆ ಮಾರಾಟ ಮಾಡದೇ ಇರುವ ಕಾರಣ ನಾನು ಯಾವುದೇ ದಾಖಲೆಗಳನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿಲ್ಲ ಎಂದರೆ ಸಾಕ್ಷಿ ಹಾಜರು ಪಡಿಸಬೇಕು ಎಂದು ನನಗೆ ಗೊತ್ತಾಗಿಲ್ಲ ಈಗ ಗೊತ್ತಾಗಿದೆ ಹಾಜರು ಪಡಿಸುತ್ತೇನೆ ಎಂದು ನುಡಿಯುತ್ತಾರೆ. ಪ್ರಭುರವರಿಗೆ ಈ ದಾವೆಯಲ್ಲಿ ಸೇರಿಸಿಲ್ಲ ಎಂದರೆ ಸರಿ. ದಾವಾ ಜಮೀನಿನ ಸ್ವಾಧಿನದಲ್ಲಿ ಇದ್ದೇನೆ ಎಂದು ತೋರಿಸಲು ನ್ಯಾಯಾಲಯಕ್ಕೆ ದಾಖಲೆಗಳನ್ನು ಹಾಜರುಪಡಿಸಿಲ್ಲ ಎಂದರೆ ಸರಿಯಲ್ಲ. ನಿವೇಶನಗಳನ್ನು ಖರೀದಿ ಮಾಡಿದವರಿಗೆ ನೀವು ಹೋರಗೆ ಹಾಕಲು ಪ್ರಯತ್ನ ಪಟ್ಟಿಲ್ಲ ಎಂದರೆ ಸಾಕ್ಷಿ ನನ್ನ ಗಂಡನ ಕಾಲದಲ್ಲಿ ಅವರು ಖರೀದಿ ಮಾಡಿದ್ದರು ಎಂದು ನುಡಿಯುತ್ತಾರೆ. ನನ್ನ ಗಂಡ ಅಥವಾ ಅತ್ತೆ ಸದರಿ ನಿವೇಶನಗಳನ್ನು ಮಾರಾಟ ಮಾಡಿದ್ದಾರೆ ಎಂದು ತೋರಿಸಲು ನಾನು ದಾಖಲೆಗಳನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿಲ್ಲ.

ದಾವಾ ಜಮೀನಿನಲ್ಲಿ ಒಂದು ಖಾಲಿ ನಿವೇಶನದ ಮೌಲ್ಯ 1.5 ಲಕ್ಷದಿಂದ 2 ಲಕ್ಷ ಇದೆ ಎಂದರೆ ಸಾಕ್ಷಿ ನನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ. ದಾವಾ ಜಮೀನಿನ ಸುತ್ತಾಮುತ್ತಾ ಜಮೀನಿನ ಮೌಲ್ಯ ಪ್ರತಿ ಎಕರೆಗೆ 15 ರಿಂದ 20 ಲಕ್ಷ ಇದೆ ಎಂದರೆ ಸಾಕ್ಷಿ ಇರಬಹುದು ಆದರೆ ನನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ. ನಮ್ಮ ಕುಟಂಬಕ್ಕೆ ಮತ್ತು ಪ್ರತಿವಾದಿಯ ಕುಟುಂಬದ ಮಧ್ಯ ಸಂಬಂಧ ಸರಿಯಿಲ್ಲ ಎಂದರೆ ಸರಿ. 4ನೇ ಪ್ರತಿವಾದಿಯ ಮಕ್ಕಳಿಗೆ ಈ ದಾವೆಯಲ್ಲಿ ಪಕ್ಷಗಾರರನ್ನಾಗಿ ಮಾಡಿಲ್ಲ ಎಂದರೆ ಸರಿ. ನಮ್ಮ ಮಾವ ದೇಶಾಂತರ ಹೋಗಿದ್ದಾರೆ ಎಂದು ಇಲ್ಲಿಯವರೆಗೆ ಯಾವುದಾದರೂ ಕ್ರಮ ಕೈಗೊಂಡಿದ್ದಿರಾ ಎಂದರೆ ಸಾಕ್ಷಿ ನಮ್ಮ ವಕೀಲರಿಗೆ ದಾಖಲೆಗಳನ್ನು ಕೊಟ್ಟಿದ್ದೇವೆ ಎಂದು ನುಡಿಯುತ್ತಾರೆ. ನಮ್ಮ ಮಾವ ಕಾಣೆಯಾದ್ದಾರೆ ಎಂದು ನಮ್ಮ ವಕೀಲರು ಯಾವುದೇ ದಾವೆ ಅಥವಾ ಪ್ರಕರಣ ದಾಖಲಿಸಿಲ್ಲ. ದಾವಾ ಜಮೀನಿನ ಬಗ್ಗೆ ನನಗಿಂತ ಜಾಸ್ತಿ ನಮ್ಮ ಅತ್ತೆ ಮಾವರಿಗೆ ಗೊತ್ತು ಎಂದರೆ ಸರಿ. ಯಾರಿಗೆ ಎಷ್ಟು ಪಾಲು ಬಂದಿರುತ್ತದೆ ಎಂದು ನಮ್ಮ ಅತ್ತೆ ಮಾವರಿಗೆ ಗೊತ್ತು ಎಂದರೆ ಸಾಕ್ಷಿ ನನಗೂ ಸಹ ಗೊತ್ತಿದೆ ಎಂದು ನುಡಿಯುತ್ತಾರೆ.

ಪ್ರತಿವಾದಿಯರಿಗೆ ಜಮೀನನ್ನು ವರ್ಗಾವಣೆ ಮಾಡಿ ಕೋಡದೇ ಇದು ನಮ್ಮ ಹೆಸರಿನಲ್ಲಿ ಇರುವುದನ್ನು

ದುರುಪಯೋಗ ಪಡಿಸಿಕೊಂಡು ಸುಳ್ಳು ದಾವೆಯನ್ನು ಸಲ್ಲಿಸಿರುತ್ತೇನೆ ಎಂದರೆ ಸರಿಯಲ್ಲ. ಪ್ರತಿವಾದಿಯರಿಗೆ ವರ್ಗಾವಣೆ ಮಾಡಿ ಕೋಡದೇ ಇದ್ದಾಗ ಜಗಳವಾಗಿ ನಮ್ಮ ಮಾವ ಸಿಸಿ ಸಂಖ್ಯೆ 628/2015 ರಲ್ಲಿ ಕ್ರಿಮಿನಲ್ ಪ್ರಕರಣ ದಾಖಲಿಸಿರುತ್ತಾರೆ ಎಂದರೆ ಸಾಕ್ಷಿ ನನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ. ಪ್ರತಿವಾದಿಯರ ಸ್ವಾಧಿನವನ್ನು ನಾವು ಬಿಡಿಸಲು ಪ್ರಯತ್ನ ಪಟ್ಟಿಲ್ಲ ಎಂದರೆ ಸಾಕ್ಷಿ ಅವರು ಕಬ್ಜಯಲ್ಲಿ ಇಲ್ಲ ನಾವು ಕಬ್ಜಯಲ್ಲಿ ಇದ್ದೇವೆ ಎಂದು ನುಡಿಯುತ್ತಾರೆ. ನಾವು ಯಾವುದೇ ಪ್ರಯತ್ನ ಪಟ್ಟಿಲ್ಲ ಮತ್ತು ಪ್ರತಿವಾದಿಯರ ವಿರುದ್ದ ಕ್ರಮ ಕೈಗೊಂಡಿಲ್ಲ ಎಂದರೆ ಸಾಕ್ಷಿ ನಾವೇ ದಾವಾ ಜಮೀನಿನಲ್ಲಿ ಬಿತ್ತನೆ ಮಾಡುತ್ತಿದ್ದೇವೆ ಎಂದು ನುಡಿಯುತ್ತಾರೆ. ದಾವಾ ಜಮೀನಿಗೂ ಹಾಗೂ ನನಗೆ ಯಾವುದೇ ರೀತಿಯಿಂದ ಸಂಬಂಧವಿಲ್ಲದಿದ್ದರು ಸಹ ಸುಳ್ಳು ಕಥೆ ಕಟ್ಟಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ಸಲ್ಲಿಸಿದ ನಿಪಿ-7 ರಿಂದ 23 ರ ದಾಖಲೆಗಳು ಈ ದಾವೆಗೆ ಸಂಬಂಧವಿಲ್ಲ ಎಂದರೆ ಸರಿಯಲ್ಲ.

**ವಾಟೀ ಸವಾಲು 1ನೇ ಪ್ರತಿವಾದಿ ಪರವಾಗಿ ಶ್ರೀ S.K. ವಕೀಲರಿಂದಃ**

ಪ್ರತಿವಾದಿಯರು ನಮ್ಮ ವಿರುದ್ದು ಕಂದಾಯ ದಾಖಲಾತಿಗಳ ತಿದ್ದುಪಡಿಗಾಗಿ ಅಸಲು ದಾವೆ ಸಂಖ್ಯೆ 144/2022 ರಲ್ಲಿ ದಾಖಲಿಸಿದ್ದಾರೆ ಎಂದರೆ ಸರಿ. ನಿಪಿ-7 ರಿಂದ 23 ರ ದಾಖಲೆಗಳು ಪ್ರತಿವಾದಿಯರಿಗೆ ಸಂಬಂಧಪಟ್ಟ ದಾಖಲೆಗಳಾಗಿವೆ ಎಂದರೆ ಸರಿಯಲ್ಲ.

**ಮರುವಿಚಾರಣೆಃ ಇಲ್ಲಾ**

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು)**

**ಓ.ಹೇ.ಕೇ. ಸರಿ ಇದೆ.**

**C/C ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು,**
**ಚಿಂಚೋಳಿ**